ಶ್ರೀ ಬಿ.ಹೆಚ್. ಬನ್ನಿಕೋಡ್ : ನಮ್ಮ ಹಕ್ಕನ್ನು ಕಸಿದು ಕೊಳ್ಳಲಿಕ್ಕೆ ನೋಡಿದರೆ ಅದು ಸರಿಯಲ್ಲ ಜನ ನಮ್ಮನ್ನು ಆರಿಸಿಕಳುಹಿಸಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅತ್ಯಾಚಾರವಾಗಿದೆ ಅನ್ಯಾಯವಾಗಿದೆ ಎಂದು ಹೇಳಬಾರದೇನು?

ಶ್ರೀ ಬಿ.ಹೆಚ್. ಬನ್ನಿಕೋಡ್ : ನನ್ನ ಸ್ನೇಹಿತರು ಉತ್ತರ ಹೇಳುವುದಾದರೆ ಅವರಿಗೇನು ಗೊತ್ತಿದೆ ಅದನ್ನು ಹೇಳಲು ಅವಕಾಶ ಮಾಡಿಕೊಡಿ. ಅವರ ಮೇಲೆ ಅಪಾದನೆಯನ್ನು ಮಾಡಲಿಲ್ಲ, ಅವರ ಹೆಸರನ್ನು ತೆಗೆದುಕೊಂಡಿಲ್ಲ, ಶಾಸಕರು, ಎನ್ನುವ ಶಬ್ದವನ್ನು ತೆಗೆದುಕೊಂಡಿಲ್ಲ. ಅವರು ಏಕೆ ಹೀಗೆ ಮಾಡುತ್ತಿದ್ದಾರೆ, ನನಗೆ ಗೊತ್ತಿಲ್ಲ.

ಅಧ್ಯಕ್ಷರು : ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾನು ಹೇಳಿದ್ದರಲ್ಲಿ ಏನಾದರೂ ಸರಿಪಡಿಸುವುದಿದ್ದರೆ ತಾವು ಅವಕಾಶ ತೆಗೆದುಕೊಂಡು ವಿವರಣೆ ನೀಡಿ, ಇದು ಸರಿಯಿಲ್ಲವೆಂದು ಹೇಳಿ, ಅದು ಬಿಟ್ಟು ನನ್ನ ಹಕ್ಕಿಗೆ ಇವರು ಅಡ್ಡಿ ಬರುತ್ತಿದ್ದಾರೆ. ಈ ಮಾತನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತೇನೆ. ಅಲ್ಲಿ ಸಂತಪ್ಪ ಜಂಕಿನಿ ಎಂಬವರು ತಮಗೆ ಆದಂಥ ತೊಂದರೆಗಳನ್ನು ನಿವಾರಿಸಿ ನಮಗೆ ಮನೆ ಸಿಕ್ಕಿಲ್ಲ, ನಮಗೆ ಅನ್ಯಾಯವಾಗಿದೆ ಮತ್ತು ಸರ್ಕಾರದ ಕೆಲಸದಲ್ಲಿ ಪರಿಶಿಷ್ಟ ಜಾತಿಯವರಿಗೆ ಸಿಗಬೇಕಾದ ಸೌಲಭ್ಯ ಸಿಕ್ಕಿಲ್ಲವೆಂದು ಹೇಳುವುದಕ್ಕೆ ಹೋದರೆ, ಅವರ ಮೇಲೆ ಅಲ್ಲಿನ ಪುರಸಭೆಯ ಮುಖ್ಯಾಧಿಕಾರಿ ಫಿರ್ಯಾದು ಕೊಟ್ಟು ಜೈಲಿನಲ್ಲಿ ಇಟ್ಟಂಥ ಒಂದು ಧಾರುಣ ಘಟನೆಯ ಬಗ್ಗೆ ನಾನು ಹೇಳುತ್ತಿದ್ದೇನೆ. ಅದಕ್ಕೆ ನಮ್ಮ ಶಾಸಕರು.....

ಅಧ್ಯಕ್ಷರು : ತಾವು ಮುಕ್ತಾಯ ಮಾಡಿ, ಇದಕ್ಕೆ ಏನೂ ಅರ್ಥವಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇನ್ನು ನರಗುಂದದಲ್ಲಿ ಆದಂತಹ ಬೆಳೆ ಹಾನಿಗೆ ಪರಿಹಾರ ಕೊಟ್ಟಿಲ್ಲ, ಪಂಪ್ ಸೆಟ್ ಕೊಟ್ಟಿಲ್ಲ. ಅಲ್ಲೂ ಸಹ ಜನರ ಬೇಡಿಕೆಗಳನ್ನು ಸರ್ಕಾರ ಈಡೇರಿಸಿಲ್ಲ. ಈ ರೀತಿ ಕೇವಲ 4-5 ಗೋಡೆಗಳ ಮಧ್ಯದಲ್ಲಿ, ಇಡೀ ರಾಜ್ಯದಾದ್ಯಂತ ಸುವ್ಯವಸ್ಥಿತವಾದ ರೀತಿಯಲ್ಲಿ ದೌರ್ಜನ್ಯ ಮತ್ತು ಚಾಕು ಚೂರಿ ಸಂಸ್ಕೃತಿ ಇನ್ನೂ ಮುಂದುವರೆಯುತ್ತಿರುವಂತಹ ಸೂಚನೆಗಳು ಇಲ್ಲಿ ಕಂಡು ಬರುತ್ತಿರುವುದರಿಂದ ಇದು ಪ್ರಜಾಪ್ರಭುತ್ವ ಸರ್ಕಾರ ಅಲ್ಲವೆಂದು ಸ್ಪಷ್ಟವಾಗಿ ಕೇಳಿ, ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕಳೆದ ಮೂರು ದಿವಸಗಳಿಂದ ವಿರೋಧಪಕ್ಷದವರು ಮಂಡಿಸಿದ ಅವಿಶ್ವಾಸ ನಿರ್ಣಯದ ಸಂಬಂಧ ಸಾಕಷ್ಟು ಚರ್ಚೆಯಾಗಿದೆ. ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇವೆ.

ಪ್ರಕಟಣೆ

ಈಗ ಒಂದು ಪ್ರಕಟಣೆ ಮೈಸೂರು ವಿಶ್ವ ವಿದ್ಯಾನಿಲಯದ ಸೆನೆಟ್ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ, ಈ ಕೆಳಕಂಡ ಮಾನ್ಯ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸಲಾಗಿದೆ :

1. ಶ್ರೀ ಜೆ.ಸಿ. ಮಧುಸ್ವಾಮಿ
2. ಶ್ರೀ ಬಿ. ಶಿವರಾಂ

3. ಶ್ರೀ ಕೆ.ಎನ್. ಸೋಮಸುಂದರಂ
4. ಶ್ರೀ ಕೆ. ಹರ್ಷಕುಮಾರ ಗೌಡ ಮತ್ತು
5. ಶ್ರೀಮತಿ ಮಲ್ಲಾಜಮ್ಮ

ಸೋಮವಾರ ಪ್ರಶ್ನೋತ್ತರದ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಈಗ ಸಭೆಯ ಕಾರ್ಯಕಲಾಪಗಳನ್ನು ಸೋಮವಾರ ಬೆಳಿಗ್ಗೆ 11 ಗಂಟೆಗೆ ಮುಂದೂಡಲಾಗಿದೆ.

(ಸದನವು 7 ಘಂಟೆ 33 ನಿಮಿಷಗಳಿಗೆ ಮುಕ್ತಾಯವಾಗಿ ಪುನಃ 5ನೇ ಸೆಪ್ಟೆಂಬರ್ ಮಾಹೆ 1993ರ ಸೋಮವಾರದಂದು ಬೆಳಿಗ್ಗೆ 11 ಘಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)